ತೋಟಗಾರಿಕೆ ಬೆಳೆಗಳಿಗೆ ಬೆಳೆ ವಿಮೆ

603(6530) : ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಬೆಳೆಗಳಿಗೆ ನೀಡುತ್ತಿರುವಂತೆ, ತೋಟಗಾರಿಕಾ ಬೆಳೆಗಳಿಗೆ ಬೆಳೆ ವಿಮೆ ಅಳವಡಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೆ;

ಆ) ಇದ್ದಲ್ಲಿ ಯಾವ್ಯಾವ ತೋಟಗಾರಿಕಾ ಬೆಳೆಗಳಿಗೆ ಬೆಳೆ ವಿಮೆ ಒದಗಿಸುವ ಉದ್ದೇಶವಿದೆ;

ಇ) ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ (ವಿವರ ಒದಗಿಸುವುದು)

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು):

ಅ) ಇದೆ.

ಆ) ಪ್ರಸ್ತುತ ತೋಟಗಾರಿಕೆ ಬೆಳೆಗಳಾದ ಆಲೂಗೆಡ್ಡೆ, ಈರುಳ್ಳಿ ಮತ್ತು ಮೆಣಸಿನಕಾಯಿ ಬೆಳೆಗಳನ್ನು ಬೆಳೆ ವಿಮಾ ಯೋಜನೆಯಡಿ ಅಳವಡಿಸಲಾಗಿದೆ. ಇತರೆ ತೋಟಗಾರಿಕೆ ಬೆಳೆಗಳಾದ ಮಾವು, ಬಾಳೆ, ದ್ರಾಕ್ಷಿ, ನಿಂಬೆ, ಟೊಮ್ಯಾಟೋ, ಬದನೆ, ಬೀನ್ಸ್, ಅರಿಶಿನ ಬೆಳೆಗಳನ್ನು ಬೆಳೆ ವಿಮೆ ಯೋಜನೆಯಡಿ ಅಳವಡಿಸಲು ಉದ್ದೇಶಿಸಲಾಗಿದೆ.

ಇ) ಬೆಳೆ ವಿಮೆ ಯೋಜನೆಯನ್ನು ಭಾರತ ಸರ್ಕಾರದ ಸಹಯೋಗದೊಂದಿಗೆ ಮತ್ತು ಭಾರತೀಯ ಕೃಷಿ ವಿಮಾ ಕಂಪನಿಯ ಮೂಲಕ ಜಾರಿಗೊಳಿಸಲಾಗುತ್ತಿದೆ. ಯಾವುದೇ ಬೆಳೆಗಳಿಗೆ ಭಾರತೀಯ ಕೃಷಿ ವಿಮಾ ಕಂಪನಿಯು ಪ್ರೀಮಿಯಂ, ಥ್ರೆಶೋಲ್ಡ್ ಇಳುವರಿ ಇತ್ಯಾದಿ ವಿವರಗಳನ್ನು ಪರಿಶೀಲಿಸಿ ವಿಮೆ ಒದಗಿಸುತ್ತದೆ. ಈ ವಿವರಗಳನ್ನು ಲೆಕ್ಕ ಮಾಡಲು ಅಗತ್ಯವಿರುವ ಹಿಂದಿನ 10 ವರ್ಷಗಳ ಉತ್ಪಾದನಾ ಅಂಕಿಅಂಶಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ಪಡೆದು ಸದರಿ ವಿಮಾ ಕಂಪನಿಗೆ ಕಳುಹಿಸಲಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ರೈತರಿಗೆ ಯಾವುದು ಬಹಳ ಅಗತ್ಯವಿದೆ, ಆ ಬೆಳೆಗಳಿಗೆ ವಿಮಾ ಯೋಜನೆಯನ್ನು ತರಲಾಗಿಲ್ಲ. ಉದಾಹರಣೆಗೆ ಟೊಮ್ಯಾಟೋ. ಒಂದು ಎಕರೆಯಲ್ಲಿ ಟೊಮ್ಯಾಟೋ ಬೆಳೆಯಬೇಕಾದರೆ ಎರಡು ಲಕ್ಷ ರೂಪಾಯಿ ಇನ್‌ವೆಸ್ಟ್‌ಮೆಂಟ್ ಮಾಡಬೇಕಾಗುತ್ತದೆ. ಅಷ್ಟು ಖರ್ಚು ಮಾಡಿ, ಆ ಬೆಳೆ ಕೈಗೆ ಬರುವ ಹೊತ್ತಿಗೆ ಸರಿಯಾಗಿ, ಅದನ್ನು ಬೀದಿಗೆ ಬಿಸಾಕತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮಾನ್ಯ ತೋಟಗಾರಿಕಾ ಸಚಿವರ ಜಿಲ್ಲೆಯಾದ ಕೋಲಾರ ಜಿಲ್ಲೆಯಲ್ಲಿ ಇದು ಹೇರಳವಾಗಿ ನಡೆಯುತ್ತದೆ. ದಾರಿಯಲ್ಲೇ ಬಿಸಾಕಿಬಿಟ್ಟಿರುತ್ತಾರೆ. ಮುಳಬಾಗಿಲಿನಿಂದ ಬರುವಾಗ ನೋಡಿದರೆ, ನ್ಯಾಷನಲ್ ಹೈವೇನಲ್ಲಿ ರೋಡ್ ಪಕ್ಕದಲ್ಲೇ ನರಸಾಪುರದವರೆಗೆ ಹಾಕಿರುತ್ತಾರೆ. ಇವರು ಅದನ್ನು ಉದ್ದಕ್ಕೂ ನೋಡಿಕೊಂಡೇ ಬರುತ್ತಾರೆ. ಇಂಥವು ಇನ್ನೂ ಕೆಲವು ತೋಟಗಾರಿಕಾ ಬೆಳೆಗಳಿವೆ. ನನ್ನ ದೃಷ್ಟಿಯಲ್ಲಿ, ಎಲ್ಲಾ ತೋಟಗಾರಿಕಾ ಬೆಳೆಗಳಿಗೂ ವಿಮೆಯನ್ನು ಮಾಡತಕ್ಕಂಥದ್ದು ಮೊದಲನೇ ಕರ್ತವ್ಯವಾಗಬೇಕು. ಅದನ್ನು ಸರ್ಕಾರ ಮಾಡಲೇಬೇಕು. ಇಲ್ಲದಿದ್ದರೆ, ಈ ಮಾರ್ಕೆಟ್ ಫ್ಲಕ್ಚುಯೇಷನ್‌ನಲ್ಲಿ ರೈತರು ಉಳಿಯುವ ಹಾಗಿಲ್ಲ. ಮಾರ್ಕೆಟ್ ಫ್ಲಕ್ಚುಯೇಷನ್ನಿನಲ್ಲಿ ಒಂದೊಂದು ದಿವಸ ರೇಟ್ ಇರುತ್ತದೆ, ಒಂದೊಂದು ದಿವಸ ರೇಟ್ ಇರುವುದಿಲ್ಲ. ಈ ಮಾರ್ಕೆಟ್ ಫ್ಲಕ್ಚುಯೇಷನ್ನಿನಲ್ಲಿ, ರೈತರು ಹಾಕಿದಂಥ ಬಂಡವಾಳದ ಹಣವೂ ವಾಪಸ್ಸು ಬರದೇ ಇರುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ, ಈಗಾಗಲೇ

ಆಗಿದೆ. ಹಾಗಾಗಿ, ಸುಮಾರು ಜನ ರೈತರು ದಿವಾಳಿ ಎದ್ದುಹೋಗಿ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಉಳಿದಂಥ ಬೆಳೆಗಳನ್ನೂ ಸರ್ಕಾರ ವಿಮೆ ಯೋಜನೆಗೆ ಸೇರಿಸಬೇಕು. ಇವರು ನೀಡಿರುವ ಉತ್ತರದಲ್ಲಿ, ಭಾರತ ಸರ್ಕಾರದ ಸಹಯೋಗದೊಂದಿಗೆ, ಎಂದು ಹೇಳುತ್ತಾರೆ. ಎಲ್ಲದಕ್ಕೂ ಭಾರತ ಸರ್ಕಾರವನ್ನೇ ಕಾಯ್ದುಕೊಂಡಿದ್ದರೆ ಆಗುವುದಿಲ್ಲ. ಏಕೆಂದರೆ, ನಾವು ಸುಮಾರು 10–20 ವರ್ಷಗಳಿಂದಲೂ, ನ್ಯಾಚುರಲ್ ಕೆಲಾಮಿಟಿ ಬಿಲ್ ಅಮೆಂಡ್ ಮಾಡಬೇಕು ಎಂದು ಹೇಳುತ್ತಿದ್ದರೂ, ಇವತ್ತಿನವರೆಗೆ ಸರ್ಕಾರ ಅದನ್ನು ಮಾಡಲಿಲ್ಲ. ಹಾಗಾಗಿ, ಈ ಬೆಳೆಗಳನ್ನೂ ವಿಮೆಗೆ ಸೇರಿಸಿಕೊಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಅವರು ಕೊಡುತ್ತಾರೋ, ಬಿಡುತ್ತಾರೋ ಅದು ಬೇರೆ ವಿಷಯ. ಆದರೆ ಕರ್ನಾಟಕ ರಾಜ್ಯದವರು ಪ್ರಪೋಸ್ ಮಾಡುವಾಗ ತೆಂಗು, ಅಡಿಕೆ, ಸ್ಪೈಸಸನ್ನು ಸೇರಿಸಲು ನಿಮಗೆ ಆಗಿರುವಂಥ ತೊಂದರೆ ಏನೆನ್ನುವುದು ನಮಗೆ ಅರ್ಥವಾಗಬೇಕು. ತಾವು 2–3 ಕ್ರಾಪ್‌ಗಳನ್ನು ಮಾತ್ರ ಕೊಟ್ಟಿದ್ದೀರಿ. potato, onion and chillies are covered ಎಂದು ಹೇಳಿದ್ದೀರಿ. ಉಳಿದ mango, banana, grapes, lime, tomato, brinjal, beans and turmeric crops are proposed ಎಂದು ಹೇಳುತ್ತೀರಲ್ಲಾ, ಹಾಗಾದರೆ ತೆಂಗು ಬೆಳೆಯುವವರು ರೈತರಲ್ಲವೇ? ಅಡಿಕೆ ಬೆಳೆಯುವವರು ರೈತರಲ್ಲವೇ? ಸ್ಪೈಸಸ್ ಬೆಳೆಯುವವರು ರೈತರಲ್ಲವೇ? ಇವುಗಳಿಗೂ ಕೊಡಿ ಎಂದು ಸೇರಿಸಿ ಕಳುಹಿಸಲು ನಿಮಗೆ ಏನಾಗಿದೆ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾರ್ಕೆಟ್ ಫ್ಲಕ್ಚುಯೇಷನ್ ಆಗುತ್ತಿರುವುದರಿಂದ, ಟೊಮ್ಯಾಟೋ, ಮ್ಯಾಂಗೋ ಮುಂತಾದ ಫುಡ್ ಐಟಂಗಳನ್ನು ಸ್ಟೋರೇಜ್ ಮಾಡಲಿಕ್ಕೆ, ಒಂದು ಕೋಲ್ಡ್ ಸ್ಟೋರೇಜನ್ನಾದರೂ ಮಾಡಿದರೆ, ಅದರಲ್ಲಿಟ್ಟು ಅವುಗಳ ಧಾರಣೆ ಜಾಸ್ತಿಯಾದಾಗ ಮಾರಾಟ ಮಾಡಲಿಕ್ಕಾದರೂ ವ್ಯವಸ್ಥೆಯಾಗುತ್ತದೆ. ಅದನ್ನೇನಾದರೂ ಆಲೋಚನೆ ಮಾಡಿದ್ದೀರಾ?

ಶ್ರೀ ಆರ್. ಧ್ರುವನಾರಾಯಣ್ : ಅದರ ಜೊತೆಗೆ ಬಾಳೆಯನ್ನು ದಯಮಾಡಿ ಬೆಳೆವಿಮೆಗೆ ಸೇರಿಸಬೇಕು. ಏಕೆಂದರೆ, ಮೊನ್ನೆ ಗಾಳಿ ಮಳೆಯಿಂದ ಪ್ರಕೃತಿ ವಿಕೋಪಕ್ಕೆ ಬಹಳಷ್ಟು ತೋಟಗಳು ನಾಶವಾಗಿವೆ. 10–12 ತಿಂಗಳು ಬೆಳೆದಿದ್ದಂಥ ಗಿಡಗಳು, ಗೊನೆ ಬಂದಿದ್ದಂಥ ಸಮಯದಲ್ಲೇ ಬಿದ್ದುಹೋಗಿವೆ. ಅವರಿಗೆ ಒಂದು ಎಕರೆಗೆ 250 ರೂಪಾಯಿ ಪರಿಹಾರವನ್ನು ಕೊಡುತ್ತಾರೆ. ಮೊನ್ನೆಯೇ ನಾನು ಹೇಳಿದೆ, ಒಂದು ಗೊನೆಗೆ 250 ರೂಪಾಯಿ ಆಗುತ್ತದೆ, ಆದರೆ ನೀವು ಒಂದು ಎಕರೆಗೆ 250 ರೂಪಾಯಿ ಪರಿಹಾರ ಕೊಡುತ್ತೀರಿ. ಆದ್ದರಿಂದ, ತಾವು ದಯಮಾಡಿ ಬಾಳೆಯನ್ನು ಬೆಳೆ ವಿಮೆಗೆ ಸೇರಿಸಬೇಕು.

ಶ್ರೀ ಜಿ. ಚಂದ್ರಣ್ಣ : ಅವರು ಕಛೇರಿಗಳಿಗೆ ಒಂದು ಸಲ ಓಡಾಡಲಿಕ್ಕೇ ಅಷ್ಟು ಹಣ ಬೇಕಾಗುತ್ತದೆ. ಅವರು ಹತ್ತು ಸಲ ಓಡಾಡಿದರೆ 2 ಸಾವಿರ ರೂಪಾಯಿ ಬೇಕು. ಆದ್ದರಿಂದ, ತಾವು ದಯಮಾಡಿ ಈ ಬೆಳೆ ಬಗ್ಗೆ ಸ್ಪಷ್ಟವಾಗಿ ಹೇಳಿ.

ಶ್ರೀ ಜೆ. ನರಸಿಂಹಸ್ವಾಮಿ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ್ದಕ್ಕೆ ಪೂರಕವಾಗಿ, ಬೆಳೆ ವಿಮೆ ಮಾಡುವುದರ ಜೊತೆಗೆ, ಇವತ್ತು ಹಾಪ್‌ಕಾಮ್ಸ್ ಏನಿದೆ, ಇದು ತೋಟಗಾರಿಕೆ ಮತ್ತು ಸಹಕಾರ ಇಲಾಖೆ ಇವೆರಡಕ್ಕೂ ಬರುವುದರಿಂದ ಹೇಳುತ್ತಿದ್ದೇನೆ, ಹಾಪ್‌ಕಾಮ್ಸ್‌ಗೆ ಹಣ್ಣು ಮತ್ತು ತರಕಾರಿಗಳನ್ನು ಮಾರಲು ತೆಗೆದುಕೊಂಡು ಹೋದರೆ ಅಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ

ಮಾತ್ರ ತೆಗೆದುಕೊಂಡು ಉಳಿದುದ್ದನ್ನು ಬಿಟ್ಟುಬಿಡುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಸಹಕಾರ ಸಚಿವರು ಮತ್ತು ತೋಟಗಾರಿಕಾ ಸಚಿವರು ಗಮನ ಕೊಟ್ಟು, ಸಫಲ್ ಮತ್ತು ಹಾಪ್‌ಕಾಮ್ಸ್‌ಗಳು ಹೆಚ್ಚಾಗಿ ಹಣ್ಣು ಮತ್ತು ತರಕಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಹಣ್ಣು ಮತ್ತು ತರಕಾರಿಗಳನ್ನು ತೆಗೆದುಕೊಂಡು, ಬೆಂಗಳೂರಿನ ನಾಲ್ಕೂ ಕಡೆಗಳಲ್ಲಿ ಸಂಸ್ಕರಣೆ ಮಾಡಿ ಗಲ್ಫ್ ಕಂಟ್ರಿಗಳಿಗೆ ಕಳುಹಿಸಬೇಕು. ಏಕೆಂದರೆ, ಇವುಗಳಿಗೆ ಗಲ್ಫ್ ಕಂಟ್ರಿಗಳಲ್ಲಿ ಬೇಡಿಕೆ ಇದೆ. ನಮ್ಮ ರೈತರು ಇವತ್ತು ಬೆಳೆಯುವುದಕ್ಕಿಂತ ಹೆಚ್ಚಾಗಿ ಸಾಲಗಾರರು ಏಕೆ ಆಗುತ್ತಿದ್ದಾರೆಂದರೆ, ಅವರು ಬೆಳೆದಂಥ ಬೆಳೆಗಳಿಗೆ ಸರಿಯಾದ ಬೆಲೆ ಸಿಗದೇ ಇರುವುದರಿಂದ ಸಾಲಗಾರರಾಗುತ್ತಿದ್ದಾರೆ. ಆದ್ದರಿಂದ, ತಾವು ದಯವಿಟ್ಟು ಈ ಕಡೆ ಗಮನ ಕೊಡಬೇಕು.

ಶ್ರೀ ಆರ್. ಶ್ರೀನಿವಾಸ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀರಾಮರೆಡ್ಡಿಯವರು, ಮಾಧುಸ್ವಾಮಿಯವರು, ನರಸಿಂಹಸ್ವಾಮಿಯವರು ಹೇಳಿದಂತೆ ಇದು ಬಹಳ ದೊಡ್ಡ ಸಮಸ್ಯೆ. ಇದನ್ನು ಸುದೀರ್ಘವಾಗಿ ಚರ್ಚೆ ಮಾಡತಕ್ಕಂಥಾದ್ದರ ಅವಶ್ಯಕತೆ ಇದೆ. ಆಲಿಕಲ್ಲು ಮಳೆ ಬಿದ್ದಾಗ ಬೆಳೆ ನಷ್ಟವಾಗುತ್ತದೆ. ಮೊನ್ನೆ ಇದೇ ಕಾರಣದಿಂದ ಚಿಕ್ಕಬಳ್ಳಾಪುರದಲ್ಲಿ ನಷ್ಟವಾಗಿದೆ. ಇನ್ನೂ ಅನೇಕ ಕಡೆ ಅತಿವೃಷ್ಟಿಯಿಂದ ನಷ್ಟವಾಗುತ್ತದೆ. ಇಂಥ ನಷ್ಟಕ್ಕೆ ಸರ್ಕಾರ ಆಗಾಗ ಪರಿಹಾರವನ್ನು ಕೊಡುವ ಬದಲು ಶಾಶ್ವತವಾಗಿ ಈ ಒಂದು ವಿಮೆಯನ್ನು ಮಾಡಿದಾಗ ಖಂಡಿತವಾಗಿಯೂ ಕೂಡ ರೈತರಿಗೆ ಅದು ಲಾಭದಾಯಕವಾಗುತ್ತದೆ. ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕೆಲವೊಂದನ್ನು ಪ್ರಪೋಸ್ ಮಾಡಿ ಕಳುಹಿಸಿದ್ದೇವೆ. ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ ಅಡಿಕೆ ಮತ್ತು ಉಳಿದ ಬೆಳೆಗಳನ್ನೂ ಕೂಡ ಪ್ರಪೋಸ್ ಮಾಡಿ ಕಳುಹಿಸಬೇಕಾಗುತ್ತದೆ. ಏಕೆಂದರೆ, ಆ ಬೆಳೆಗಳಿಂದಲೂ ಕೂಡ ನಷ್ಟವಾಗುತ್ತದೆ. ಮೊನ್ನೆಯ ದಿವಸ ಅಡಿಕೆಗೆ ರೋಗ ಬಂತು, ಕಳೆದ 3–4 ವರ್ಷಗಳಿಂದ ಬೆಳೆಯೇ ಬರಲಿಲ್ಲ, ಇಂಥ ಸಂದರ್ಭದಲ್ಲಿ ನಾವು ಏನು ಮಾಡುವುದಕ್ಕಾಗುತ್ತದೆ? ಆದ್ದರಿಂದ, ಈ ಬಗ್ಗೆ ಚಿಂತನೆ ಮಾಡಿದ್ದು, ಸಾಮೂಹಿಕವಾಗಿ ವಿಮಾ ಯೋಜನೆ ಮಾಡುವ ಬದಲು ಇಂಡಿವಿಜ್ಯುಯಲ್ಲಾಗಿ, ಹಸುಗಳಿಗೆ ಯಾವ ರೀತಿ ಇನ್‌ಷೂರೆನ್ಸ್ ಇದೆ, ಕಾರುಗಳಿಗೆ ಯಾವ ರೀತಿ ಇನ್‌ಷೂರೆನ್ಸ್ ಇದೆ, ಆ ರೀತಿ ಪ್ರತಿಯೊಂದು ತೋಟಕ್ಕೆ ಪ್ರತ್ಯೇಕವಾಗಿ ಇನ್‌ಷೂರೆನ್ಸ್ ಮಾಡಿಸಿ, ಅದರಲ್ಲಿ ಅರ್ಧ ಭಾಗ ಪ್ರೀಮಿಯಂ ಅನ್ನು ಸರ್ಕಾರ ಕೊಡತಕ್ಕಂಥಾದ್ದು ಮತ್ತು ಉಳಿದ ಅರ್ಧ ಭಾಗ ಪ್ರೀಮಿಯಂ ಅನ್ನು ರೈತ ಕೊಡತಕ್ಕಂಥಾದ್ದು ವ್ಯವಸ್ಥೆಯನ್ನು ಮಾಡಿದಾಗ ಒಳ್ಳೆಯದಾಗುತ್ತದೆ ಎಂದು ಚಿಂತನೆ ಮಾಡಿದ್ದೇವೆ. ಒಂದು ಎಕರೆಗೆ ಇಷ್ಟು ಆಗುತ್ತದೆ ಎಂದು ಅಸೆಸ್‌ಮೆಂಟ್ ಮಾಡಿ, ಆ ಅಸೆಸ್‌ಮೆಂಟ್ ಮುಖಾಂತರ ಪ್ರೀಮಿಯಂ ಅನ್ನು ಫಿಕ್ಸ್ ಮಾಡತಕ್ಕಂಥಾದ್ದನ್ನು ವ್ಯವಸ್ಥೆ ಮಾಡಿದರೆ, ಆ ಒಂದು ಕ್ರಾಪ್ ಫೈಲ್ಯೂರ್ ಆಯಿತು ಅಥವಾ ಓವರ್ ಡೋಸೇಜ್ ಮೆಡಿಸನ್ಸ್ ಕೊಟ್ಟು ಏನಾದರೂ ಆಯಿತು ಅಥವಾ ಯಾವುದೋ ಕೆಲಾಮಿಟಿ ಕಂಡೀಷನ್ನಿನಲ್ಲಿ ಅಥವಾ ಎನ್ವಿರಾನ್‌ಮೆಂಟ್ ಕಂಡೀಶನ್‌ನಲ್ಲಿ ಏನಾದರೂ ಹೆಚ್ಚು ಕಡಿಮೆಯಾದಾಗ ಇನ್‌ಷೂರೆನ್ಸ್ ಕ್ಲೈಂ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅಂಥಾದ್ದನ್ನು ಈಗಾಗಲೇ ನಾವು ಡಿಪಾರ್ಟ್‌ಮೆಂಟ್‌ನವರೆಲ್ಲಾ ಕುಳಿತುಕೊಂಡು ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಪ್ರಪೋಸಲ್ ಕಳುಹಿಸುವುದಕ್ಕೆ ಕೇಂದ್ರ ಸರ್ಕಾರ ಅನುಮತಿ ಕೊಡಬೇಕು. Seed Act, Insurance ಇವೆಲ್ಲಾ ಇದೆಯಲ್ಲಾ ಇದನ್ನು ನಾವು ನೇರವಾಗಿ ತೆಗೆದುಕೊಳ್ಳುವಹಾಗಿಲ್ಲ. ಈಗ ಮಾನ್ಯ ಧ್ರುವನಾರಾಯಣ್‌ರವರು ಹೇಳಿದ ಹಾಗೆ, ಪಾಪ, ನಾವು

ಕೊಡುವುದು 250 ರೂಪಾಯಿಗಳು. ಇವತ್ತು banana ಬೆಳೆಯಬೇಕಾದರೆ ಒಂದು ಎಕರೆಗೆ ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಖರ್ಚಾಗುತ್ತದೆ. ಅವುಗಳಿಗೆ ಏನಾದರೂ ಕಲ್ಲು ಬಿದ್ದರೆ ಅವೆಲ್ಲಾ ಹೋಗಿಬಿಡುತ್ತವೆ. ಇದನ್ನು ಬಹಳವಾಗಿ ಚಿಂತನೆ ಮಾಡಬೇಕಾಗುತ್ತದೆ. ಇದಕ್ಕೆ insurance ಅಂತೂ ಬಹಳ ಮುಖ್ಯವಾದಂಥ ಅವಶ್ಯಕತೆಯಿದೆ. ಈ ಟೊಮ್ಯಾಟೋ ಮುಂತಾದವುಗಳ processing units ಏನಿದೆ, ಅದಕ್ಕೆ food process ಎಲ್ಲಾ ಬರುತ್ತಿದೆ. ಈಗ by-products ಬರದೇ ಇದ್ದರೆ, ನಾವು ಇವತ್ತು ಏನೂ ಮಾಡುವುದಕ್ಕಾಗುವುದಿಲ್ಲ. ಬೆಲೆ ನಿಗದಿ ಇಲ್ಲ. ಈಗ ನಮ್ಮ ಗೌರವಾನ್ವಿತ ಸದಸ್ಯರಾದ ಮಾನ್ಯ ಶ್ರೀರಾಮರೆಡ್ಡಿಯವರು ಟೊಮ್ಯಾಟೋ ಬೆಳೆಯುವುದಕ್ಕೆ ಒಂದು ಎಕರೆಗೆ 2 ಲಕ್ಷ ರೂಪಾಯಿಗಳ ವೆಚ್ಚವಾಗುತ್ತದೆಂದು ಹೇಳಿದರು. ಸನ್ಮಾನ್ಯ ಮಾಧುಸ್ವಾಮಿಯವರೆ, ಅವರು ನ್ಯಾಯವಾಗಿ ಬೆಳೆ ಬೆಳೆದಿದ್ದರೆ ಒಂದು ಎಕರೆ ಜಾಗದಲ್ಲಿ ಟೊಮ್ಯಾಟೋ ಬೆಳೆಯುವುದಕ್ಕೆ 2 ಲಕ್ಷ ರೂಪಾಯಿ ವೆಚ್ಚವಾಗುತ್ತದೆಂದು ಹೇಳುತ್ತಿದ್ದರೇ? ಒಂದು ಎಕರೆ ಜಾಗದಲ್ಲಿ ಟೊಮ್ಯಾಟೋ ಬೆಳೆಯುವುದಕ್ಕೆ 2 ಲಕ್ಷ ರೂಪಾಯಿಗಳ ವೆಚ್ಚವಾಗುವುದಿಲ್ಲ. ಒಂದು ಎಕರೆ ಪ್ರದೇಶದಲ್ಲಿ ಟೊಮ್ಯಾಟೋ ಬೆಳೆಯುವುದಕ್ಕೆ ಸುಮಾರು 50 ಸಾವಿರ ರೂಪಾಯಿಗಳ ವೆಚ್ಚವಾಗಬಹುದು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ನಿಮಗೆ 15 ಸಾವಿರ ರೂಪಾಯಿಗಳನ್ನು ಕೊಟ್ಟುಬಿಡುತ್ತೇವೆ. 25 ಸಾವಿರ ರೂಪಾಯಿಗಳು ಜಾಸ್ತಿ ಆಗುತ್ತದೆ, 15 ಸಾವಿರ ರೂಪಾಯಿಗಳಿಗೆ ಒಂದು ಎಕರೆ ಜಾಗದಲ್ಲಿ ಟೊಮ್ಯಾಟೋ ಅನ್ನು ನೀವು ಬೆಳೆದು ಬಿಡಿ. ಈ ಮಂತ್ರಿಗಳು ಯಾವ ರೀತಿ ಹೇಳುತ್ತಿದ್ದಾರೆ ನೋಡಿ.

ಶ್ರೀ ಆರ್. ಶ್ರೀನಿವಾಸ್ : ಗೌರವಾನ್ವಿತ ಮಾನ್ಯ ಅಧ್ಯಕ್ಷರು ಪಾಪ ವ್ಯವಸಾಯ ಮಾಡಿದ್ದಾರೆ. 2 ಲಕ್ಷ ರೂ. ಆಗುತ್ತದೆ ಎಂದರೆ ಏನರ್ಥ? ನೀವು ನಾವು ವ್ಯವಸಾಯ ಮಾಡತಕ್ಕಂಥವರು ಬೆಳಗ್ಗೆ ಎದ್ದ ತಕ್ಷಣ ತೋಟದಲ್ಲಿರತಕ್ಕಂಥವರು. ಅವರು ತೋಟದಲ್ಲಿ ಇಲ್ಲ, ಏನೂ ಇಲ್ಲ. ಅವರು ಟೊಮ್ಯಾಟೋ ಬೆಳೆಯುವುದಕ್ಕೆ ಎರಡು ಲಕ್ಷ ರೂ. ಒಂದು ಎಕರೆಗೆ ವೆಚ್ಚವಾಗುತ್ತದೆಂದು ಹೇಳಿದರೆ ನಂಬುವುದಕ್ಕೆ ಆಗುತ್ತದೆಯೇ?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಹಾಗಾದರೆ, ಒಂದು ಕೆಲಸ ಮಾಡಿ. 15 ಸಾವಿರ ರೂಪಾಯಿಗಳ ವೆಚ್ಚ ಮಾಡಿ, ಮಾನ್ಯ ತೋಟಗಾರಿಕಾ ಸಚಿವರಾದ ತಾವು ಬೆಳೆದುಬಿಡಿ.

ಶ್ರೀ ಆರ್. ಶ್ರೀನಿವಾಸ್ : ಮಾನ್ಯ ಶ್ರೀರಾಮರೆಡ್ಡಿಯವರು ಗದ್ದೆಯನ್ನೇ ನೋಡಿಲ್ಲ, ಹೊಲವನ್ನೇ ನೋಡಿಲ್ಲ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ನೋಡಿ, ಈ ರೀತಿ ವಾದ ಮಾಡುವುದು ಸರಿಯಲ್ಲ.

ಶ್ರೀ ಆರ್. ಶ್ರೀನಿವಾಸ್ : ನೀವು ಹೇಳುವುದನ್ನು ನಾನು ಸ್ವೀಕಾರ ಮಾಡುತ್ತೇನೆ. National Highway ಯಲ್ಲಿ ಬರುವಾಗ ಸುಮಾರು ಲೋಡುಗಟ್ಟಲೆ ಟೊಮ್ಯಾಟೋ ಹೋಗಿದೆ. ಇಲ್ಲ ಎಂದು ನಾನು ಹೇಳುವುದಿಲ್ಲ ಅದಕ್ಕೆ ಸರ್ಕಾರ support price ಸಹ ಕೊಟ್ಟು ಕೆ.ಜಿ. ಒಂದಕ್ಕೆ ಎರಡೆರಡು ರೂಪಾಯಿಗಳಂತೆ ಇದನ್ನು ನಾವು purchase ಮಾಡಿಕೊಂಡಿದ್ದೆವು. ಆ ಒಂದು ದೃಷ್ಟಿಯಲ್ಲಿ ಏನು ಸಲಹೆ ಕೊಟ್ಟಿದ್ದಾರೆ ಇವೆಲ್ಲವನ್ನೂ ಕೂಡ ನಾನು ಗಮನದಲ್ಲಿಟ್ಟುಕೊಂಡು ಮುಂದೆ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಇದನ್ನು ಮಾಡುತ್ತೇನೆಂದು ತಮ್ಮ ಮುಖೇನ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.